ಸಾಕ್ಷಿಯನ್ನು ದಿನಾಂಕಃ 24.11.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್ ಆರ್ ಜೆ ವಕೀಲರಿಂದ

ನಾನು ಮುಖ್ಯ ವಿಚಾರಣೆಯಲ್ಲಿ ನನ್ನ ಅಣ್ಣನಾದ 1 ನೇ ವಾದಿ ಪರವಾಗಿ ಸಾಕ್ಷ್ಯ ನುಡಿಯುತ್ತೇನೆಂದು ಹೇಳಿರುತ್ತೇನೆ. ನಾನು ಮೇಲೆ ಹೇಳಿದಂತೆ ಹೇಳಿಲ್ಲ ಎಂದರೆ ಸರಿಯಲ್ಲ. ದಾವಸ್ವತ್ತಿನ ಹಳೇ ಸ ನಂ 17 ಹೊಸ ಸ ನಂ 63 ರ ಒಟ್ಟು ವಿಸ್ತೀರ್ಣ 4 ಎಕರೆ 32 ಗುಂಟೆ ಪೈಕಿ 2 ಎಕರೆ 10 ಗುಂಟೆ ನಮಗೆ ಸೇರಿರುತ್ತದೆ. ನಾನು ದಾವೆಯಲ್ಲಿ 4 ಎಕರೆ 32 ಗುಂಟೆ ಬಗ್ಗೆ ಹೇಳಿರುವುದಿಲ್ಲ ಆದರೆ 2 ಎಕರೆ 10 ಗುಂಟೆ ಬಗ್ಗೆ ಹೇಳಿರುತ್ತೇನೆ. ದಾವಸ್ವತ್ತಿನ ಪೂರ್ವಕ್ಕೆ ಒಬಲರೆಡ್ಡಿ, ಪಶ್ಚಿಮಕ್ಕೆ ಬುಡ್ಡಣ್ಣ, ಉತ್ತರಕ್ಕೆ ಮುನಿವೆಂಕಟರೆಡ್ಡಿ, ದಕ್ಷಿಣಕ್ಕೆ ನನ್ನ ಜಮೀನು ಇರುತ್ತದೆ. ಹಾಲಿ ದಾವೆಯನ್ನು 2 ಎಕರೆ 10 ಗುಂಟೆ ಬರಬೇಕೆಂದು ಹಾಕಿರುತ್ತೇನೆ. ಪ್ರತಿವಾದಿಗಳಿಗೆ ದಾವಸ್ವತ್ತಿನ ಪೂರ್ವಕ್ಕೆ ಸೇರಿದ ಸ ನಂ 63 ರ 2 ಎಕರೆ 20 ಗುಂಟೆ ಜಮೀನು ಇರುತ್ತದೆ. ಆದರೆ 6 ಗುಂಟೆ ನನಗೆ ಸೇರಿದ ಸ್ವಾಧೀನದ ಜಮೀನನ್ನು ಪ್ರತಿವಾದಿಗಳು ಪಹಣಿ ಮಾಡಿಕೊಂಡಿರುತ್ತಾರೆ.

2. ದಾವಸ್ವತ್ತು ನನಗೆ ತಾತನಾದ ವೆಂಕಟರಾಮರೆಡ್ಡಿ ಕಡೆಯಿಂದ ಬಂದಿರುತ್ತದೆ. ನನ್ನ ತಾತನಿಗೆ ಜೋಡಿ ಗ್ರಾಮದಿಂದ 100 ವರ್ಷಗಳ ಹಿಂದೆಯಿಂದ ಬಂದಿರುತ್ತದೆ. ನಾನು ಹೇಳಿದಂತೆ ನನ್ನ ತಾತನಿಗೆ ಜೋಡಿ ಗ್ರಾಮದಿಂದ ದಾವಸ್ವತ್ತು ಬಂದಿರುವ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದಾವಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆ ಪಹಣಿ, ಮ್ಯುಟೇಶನ್ ಮತ್ತು ಇಸಿ ಜೊತೆಗೆ ಲೋನ್ ಮಾಡಿಕೊಂಡಿರುವ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ. ನಾನು ಮೇಲೆ ಹೇಳಿದ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಅನುಮತಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಕೆಜಿಎಫ್.